# CHAPTER -16

**ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.**

1. ಗಂಗಾ ಕಾರ್ಯ ಯೋಜನೆ ಜಾರಿಯಾದ ವರ್ಷ

   A) 1981  B) 1985  C) 1973  D) 1986

2. ಮಾನವನ ಸಣ್ಣ ಕರುಳಿನಲ್ಲಿರುವ ಈ ಬ್ಯಾಕ್ಟೀರಿಯಾ ಜಲ ಮೂಲಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಕಂಡು ಬಂದರೆ ಅದು ಜಲಮಾಲಿನ್ಯದ ಸಂಕೇತವಾಗಿದೆ.

   A) ಸ್ಟ್ರೆಪ್ಟೋಕಾಕಸ್  B) ಸಾಲ್ಮೊನೆಲ್ಲಾ ಟೈಫಿ

   C) ವಿಬ್ರಿಯೋ ಕಾಲರೆ  D) ಕೋಲಿಫಾರ್ಮ್

3. ಪರಿಸರ ಸಂರಕ್ಷಣೆಯ 5 'R' ಗಳಲ್ಲಿ ಇದು ಸೇರಿಲ್ಲ (ತಪ್ಪಾಗಿದೆ).

   A) ಮಿತಬಳಕೆ  B) ಮರುಬಳಕೆ  C) ನಿರಾಕರಣೆ  D) ನಿರಾಪೇಕ್ಷಣೆ

4. ಇದು ಪರಿಸರ ಸಂರಕ್ಷಣೆಯ ಉತ್ತಮ ವಿಧಾನವಾಗಿದೆ.

   A) ಪ್ಲಾಸ್ಟಿಕ್ ಕೈ ಚೀಲ ಬಳಕೆ  B) ಡೀಸೆಲ್ ವಾಹನ ಬಳಕೆ

   C) ಬಟ್ಟೆ ಕೈ ಚೀಲ ಬಳಕೆ  D) ಕಟ್ಟಿಗೆ ಒಲೆಗಳ ಬಳಕೆ

5. ಉಪ್ಪಿನ ಕಾಯಿ ಖಾಲಿಯಾದ ನಂತರ ಆ ಡಬ್ಬಿಯನ್ನು ಸಕ್ಕರೆ ಹಾಕಲು ಬಳಸುವುದು

   A) ಮಿತಬಳಕೆ  B) ಮರುಬಳಕೆ  C) ನಿರಾಕರಣೆ  D) ಮರು ಚಕ್ರೀಕರಣ

6. ಒಬ್ಬ ವಿದ್ಯಾರ್ಥಿನಿಯ ಮನೆಯಲ್ಲಿನ ಪ್ಲಾಸ್ಟಿಕ್ ಕೊಡವು ಒಡೆದು ಬಳಸಲು ಬಾರದಂತಾಗಿದೆ. ಪರಿಸರ ಸಂರಕ್ಷಣೆಯ ದೃಷ್ಟಿಯಲ್ಲಿ ಇದನ್ನು ನೀವು ಯಾವ ವಿಧಾನದ ಮೂಲಕ ವಿಲೇವಾರಿ ಮಾಡುವಿರಿ.

   A) ಮಿತಬಳಕೆ  B) ಮರುಬಳಕೆ  C) ಮರು ಉದ್ದೇಶ  D) ಮರು ಚಕ್ರೀಕರಣ

7. ಒಂದು ಪ್ರದೇಶದಲ್ಲಿ ಕಂಡು ಬರುವ ಇವುಗಳು ಜೀವ ವೈವಿಧ್ಯತೆಯ ಒಂದು ಮೂಲ ಮಾಪನವಾಗಿದೆ.

   A) ಪ್ರಭೇದ  B) ಗಣ  C) ಸಾಮ್ರಾಜ್ಯ  D) ಕುಟುಂಬ

8. ಈ ಎಲೆಯನ್ನು ಬೀಡಿ ಕಟ್ಟಲು ಬಳಸುತ್ತಾರೆ.

   A) ವೀಳ್ಯದೆಲೆ  B) ತೆಂಡು ಎಲೆ  C) ಬಾಳೆ ಎಲೆ  D) ತೇಗದ ಎಲೆ

9. ರಾಜಸ್ಥಾನದ ಬಿಷ್ಣೋಯಿ ಸಮುದಾಯ ಈ ಮರದ ಉಳಿವಿಗಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದರು.

   A) ಬೇವಿನ ಮರ  B) ಆಲದ ಮರ  C) ಖೇಜ್ರಿ ಮರ  D) ತೇಗದ ಮರ

10. ಚಿಪ್ಕೋ ಚಳುವಳಿ (ಅಪ್ಪಿಕೋ ಚಳುವಳಿ) ನಡೆದ ಸ್ಥಳ

   A) ಚಂಡೀಗಢ  B) ಘರ್ವಾಲ್‌ನ ರೇನಿ  C) ಅಮೃತಸರ  D) ಜೋಗೆಲ್ಲಾಪುರ

LIVEWORKSHEETS